**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 46/2020**

| | | |
|---|---|---|
| ಸಾಕ್ಷಿಯ ಹೆಸರುಃ | ಕೆ. ಕುಮಾರ | ಪ್ರಾಸಾಃ 4 |
| ತಂದೆ/ಗಂಡನ ಹೆಸರುಃ | ರಂಗಣ್ಣ | ಚಾಸಾಃ 2 |
| ವಯಸ್ಸು ಃ | 35 ವರ್ಷ | ದಿಃ 12-06-2024 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಗೌಡಗೇರಾ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ನನಗೆ ಚಾಸಾಃ 3 ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇದೆ. ದಿನಾಂಕಃ 20-10-2019 ರಂದು ಜಗಳವಾಗಿರುತ್ತದೆ. ಸದರಿ ಜಗಳವನ್ನು ಬಿಡಿಸಿರುತ್ತೇವೆ. ಸದರಿ ಚಾಸಾಃ 1 ಮತ್ತು ಆರೋಪಿತರ ನಡುವೆ ಜಗಳವಾಗಿರುತ್ತದೆ. ಪೊಲಿಸರು ಮರುದಿನ ಪಂಚನಾಮೆಗೆ ಬಂದು ನಮಗೆ ಕರೆದಾಗ ನಮ್ಮ ಸಮಕ್ಷಮದಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಹಾಕಿರುತ್ತೇನೆ. ನಿಪಿ-2 ರಲ್ಲಿರುವ ಸಾಕ್ಷಿಯ ಸಹಿಯನ್ನು ಗುರುತಿಸಿರುವುದರಿಂದ ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಬರೆದಿರುವ ವಿಷಯದ ಬಗ್ಗೆ ನನಗೆ ಮಾಹಿತಿ ಇದೆ.

**ಪಾಟಿ ಸವಾಲುಃ ಆರೋಪಿತರ ಪರ ವಕೀಲರು ಶ್ರೀ ಕೆ. ಬಿ. ಎ. ಇವರಿಂದ**

1. ನನ್ನ ಊರು ಗೌಡಗೆರಾ. ಸದರಿ ಜಗಳವು ಚಾಸಾಃ 1 ರವರ ಜಮಿನಿನಲ್ಲಿ ಆಗಿರುತ್ತದೆ. ಚಾಸಾಃ 1 ರವರ ಜಮೀನು ಕಣೆಕಲ್ ಗ್ರಾಮದಲ್ಲಿ ಇರುತ್ತದೆ. ನಾನು ಕಣೆಕಲ್ ಗ್ರಾಮಕ್ಕೆ ಕೆಲಸಕ್ಕೆ ಹೋಗಿರುತ್ತೇನೆ. ನಾನು ಗಳೆ ಹೊಡೆಯಲು ಹೋಗಿರುತ್ತೇನೆ. ಪಂಚನಾಮೆಯ ಸಮಯದಲ್ಲಿ ಯಾರು-ಯಾರು ಇದ್ದರು ಎಂಬ ಬಗ್ಗೆ ಮಾಹಿತಿ ನನಗೆ ಇದೆ. ಸದರಿ ಸ್ಥಳದಲ್ಲಿ ಚಾಸಾಃ 1, 4, 3, 5, 6 ರವರು ಮತ್ತು ನಾನು ಸ್ಥಳದಲ್ಲಿ ಇದ್ದೇವು. ಸಾಕ್ಷಿಯು ಮುಂದುವರೆದು

ಪೊಲಿಸರು ಇದ್ದರು ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯಲ್ಲಿ ಬರೆದಿರುವ ವಿಷಯ ಪೊಲಿಸರು ನಮಗೆ ಹೇಳಿರುತ್ತಾರೆ. ಜಮೀನು ಸರ್ವೆ ನಂಬರ 264 ಅದರ ಚಕಬಂದಿ ಹೇಳಲು ಬರುವುದಿಲ್ಲ. ಪಂಚನಾಮೆಯ ಚಕಬಂದಿ ಹೇಳಲು ಬರುವುದಿಲ್ಲ. ನಾನು ಪಂಚನಾಮೆಗೆ ಹೋಗದೆ ಇದ್ದರೂ ಕೂಡ ಪೊಲಿಸರ ಮಾತು ಕೇಳಿ ಅನುಕೂಲವಾಗಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**